aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Social Science (Paper 3, Kannada Medium) Key Answers

EXAM	YEAR	TYPE	SUBJECT
Karnataka Class 10	2027	Answer Key	Social Science

85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 3 ರ

ಮಾದರಿ ಉತ್ತರಗಳು

MODEL ANSWERS

OF S.S.L.C. MODEL QUESTION PAPER - 3 : 2026–27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : 85-K **Subject Code : 85-K**

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. **8x1=8**

1. ಬ್ರಿಟಿಷ್ ಭೂಕಂದಾಯ ನೀತಿಗಳಿಂದಾಗಿ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು" ಎಂಬ ಹೇಳಿಕೆಯನ್ನು ನೀಡಿದವರು

ಉತ್ತರ: C) ಚಾರ್ಲ್ಸ್ ಮೆಟಕಾಫ್ 1

2. ರಾಜಕುಮಾರ ಆರ್ಕ್ ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡನ ಹತ್ಯೆಯು ಮೊದಲನೇ ವಿಶ್ವಯುದ್ಧಕ್ಕೆ ಕಾರಣವಾಯಿತು. ಆ ರಾಜಕುಮಾರನು

ಉತ್ತರ: B) ಆಸ್ಟ್ರಿಯಾದವನು 1

3. ಅಂತರರಾಷ್ಟ್ರೀಯ ನ್ಯಾಯಾಲಯದ ಮುಖ್ಯ ಕಛೇರಿ ಇರುವುದು

ಉತ್ತರ: A) ಹೇಗ್ ಪಟ್ಟಣದಲ್ಲಿ 1

4. ಮೂಕನಾಯಕ ಪತ್ರಿಕೆಯನ್ನು ಪ್ರಾರಂಭಿಸಿದವರು

ಉತ್ತರ: B) ಡಾ. ಬಿ. ಆರ್. ಅಂಬೇಡ್ಕರ್‌ರವರು 1

5. ಭಾರತದ ಪೂರ್ವ ಕರಾವಳಿಯಲ್ಲಿ ಸ್ಥಿತಗೊಂಡಿರುವ ಬಂದರು

ಉತ್ತರ: D) ಪಾರಾದೀಪ್ 1

6. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಮೂಲಕೈಗಾರಿಕೆ ಎಂದು ಕರೆಯಲ್ಪಡುತ್ತದೆ ಏಕೆಂದರೆ,

ಉತ್ತರ: C) ಇದು ಹಲವಾರು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತದೆ 1

7. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು

ಉತ್ತರ: D) ಕೇಂದ್ರ ಹಣಕಾಸು ಸಚಿವರು 1

8. ಭಾರತ ಸರ್ಕಾರವು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿದ್ದು

ಉತ್ತರ: C) 1978ರಲ್ಲಿ 1

II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ: 8x1=8

9. ಪುಟ್ಟಬಸಪ್ಪನ ಯಾವ ಕಾರ್ಯವು ಆತನ ಜನಪ್ರಿಯತೆಯನ್ನು ಹೆಚ್ಚಿಸಿತು?

ಉತ್ತರ: ಪುಟ್ಟಬಸಪ್ಪನು ಜನರಿಗೆ ಕಿರಿಕುಳ ನೀಡುತ್ತಿದ್ದ ಅಮಲ್ದಾರನನ್ನು ಕೊಂದನು. ಇದರಿಂದ ಆತನ ಜನಪ್ರಿಯತೆಯು ಹೆಚ್ಚಿತು. 1

10. ಮುಸೋಲಿನಿಯು ಸ್ಥಾಪಿಸಿದ ರಾಜಕೀಯ ಪಕ್ಷವನ್ನು ಹೆಸರಿಸಿ.

ಉತ್ತರ: ಮುಸೋಲಿನಿಯು ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದನು. 1

11. ವಿಶ್ವಸಂಸ್ಥೆಯ ಸಚಿವ ಸಂಪುಟ ಎಂದು ಕರೆಯಲ್ಪಡುವ ಅದರ ಅಂಗಸಂಸ್ಥೆ ಯಾವುದು?

ಉತ್ತರ: ಭದ್ರತಾ ಮಂಡಳಿಯು ವಿಶ್ವಸಂಸ್ಥೆಯ ಸಚಿವ ಸಂಪುಟ ಎಂದು ಕರೆಯಲ್ಪಡುತ್ತದೆ. 1

12. ಸಾಮಾಜಿಕ ಸ್ಥರವಿನ್ಯಾಸ ಎಂದರೇನು?

ಉತ್ತರ: ಜನರನ್ನು ಆದಾಯ, ಶಿಕ್ಷಣ, ಜಾತಿ, ಲಿಂಗ, ಉದ್ಯೋಗ, ಮುಂತಾದವುಗಳ ಆಧಾರದ ಮೇಲೆ ಮೇಲು–ಕೀಳು ಎಂದು ವಿಂಗಡಿಸುವುದು. 1

13. ಕರ್ನಾಟಕದಲ್ಲಿ ಜೀತಪದ್ಧತಿಯನ್ನು ಯಾರು ರದ್ದುಗೊಳಿಸಿದರು?

ಉತ್ತರ: ಕರ್ನಾಟಕದಲ್ಲಿ ಜೀತಪದ್ಧತಿಯನ್ನು ಡಿ. ದೇವರಾಜ ಅರಸುರವರು ರದ್ದುಗೊಳಿಸಿದರು. 1

14. ಭಾರತವು ಯಾವ ಪ್ರಕಾರದ ವಾಯುಗುಣವನ್ನು ಹೊಂದಿದೆ?

ಉತ್ತರ: ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. 1

15. 'ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ಯಾರು?

ಉತ್ತರ: 'ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ಮಹಾತ್ಮಾ ಗಾಂಧೀಜಿ. 1

16. ಶ್ರೇಯಸ್‌ನು ಬ್ಯಾಂಕಿನಲ್ಲಿ ಒಂದು ಖಾತೆಯನ್ನು ಹೊಂದಿದ್ದಾನೆ. ಬ್ಯಾಂಕು ಆತನ ಠೇವಣಿಗೆ ಬಡ್ಡಿಯನ್ನು ಕೊಡುವುದಿಲ್ಲ ಆದರೆ ಸೇವಾಶುಲ್ಕವನ್ನು ವಿಧಿಸುತ್ತದೆ. ಹಾಗಾದರೆ ಆತನು ಹೊಂದಿರುವ ಬ್ಯಾಂಕ್ ಖಾತೆ ಯಾವುದು?

ಉತ್ತರ: ಶ್ರೇಯಸ್‌ನು ಚಾಲ್ತಿ ಖಾತೆಯನ್ನು ಹೊಂದಿದ್ದಾನೆ. 1

III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: **8x2=16**

17. ರಾಜ್ಯ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

ಉತ್ತರ: ರಾಜ್ಯ ಸರ್ಕಾರಿ ಸೇವೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಪತ್ರಾಂಕಿತ ಮತ್ತು ಅಪತ್ರಾಂಕಿತ ಅಧಿಕಾರಿಗಳ ನೇಮಕ

- ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆ ನಡೆಸುವುದು
- ಶಿಸ್ತು ಮತ್ತು ಪೂರ್ವಾನ್ವಯ ಬಡ್ತಿ ಪ್ರಕರಣಗಳ ಬಗ್ಗೆ ಸರಕಾರಕ್ಕೆ ಸಲಹೆ
- ವರ್ಷಕ್ಕೆ ಎರಡು ಬಾರಿ ಇಲಾಖಾ ಪರೀಕ್ಷೆಗಳನ್ನು ನಡೆಸುವುದು.
- ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಮನ್ವಯ ಕಾರ್ಯ $4X\frac{1}{2}=2$

ಅಥವಾ

ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿ.

ಉತ್ತರ: ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು.

- ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
- ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು.
- ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಂಸ್ಕೃತಿಕ, ಮಾನವೀಯ ಸಮಸ್ಯೆಗಳಿಗೆ ಪರಿಹಾರ.
- ಅಂತಾರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮಾನ್ಯತೆ ದೊರಕಿಸುವುದು.
- ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು. $4X\frac{1}{2}=2$

18. ಬಾಲಕಾರ್ಮಿಕತೆಗೆ ಕಾರಣಗಳು ಯಾವುವು?

ಉತ್ತರ: ಕಡುಬಡತನ

- ಕೌಟುಂಬಿಕ ಕಲಹ
- ವಿಚ್ಛೇದನ
- ಉದ್ಯಮಿಗಳ ಲಾಭಕೋರತನ
- ಅನಕ್ಷರತೆ
- ಮಕ್ಕಳ ಅಪಹರಣ
- ಜೀತ ಪದ್ಧತಿ
- ಅತಿಯಾದ ನಿಯಂತ್ರಣ $4X\frac{1}{2}=2$

ಅಥವಾ

ತಾರತಮ್ಯದಿಂದ ಉಂಟಾದ ಪೂರ್ವಾಗ್ರಹದ ಋಣಾತ್ಮಕ ಪರಿಣಾಮಗಳಾವುವು?

ಉತ್ತರ: ಇದು ಅಸಹನೆ

- ತಿರಸ್ಕಾರ
- ಅಗೌರವ
- ದ್ವೇಷ ಭಾವನೆ ಬೆಳೆಸಿಕೊಳ್ಳಲು ಆಸ್ಪದ ಮಾಡಿ ಕೊಡುತ್ತದೆ
- ಇದರಿಂದ ಸಾಮಾಜಿಕ ಅಂತರ ಹೆಚ್ಚುತ್ತದೆ
- ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ $4X\frac{1}{2}=2$

19. ಮೊದಲನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ.

ಉತ್ತರ: ಮರಾಠರು ಎರಡನೇ ಷಾ ಆಲಂನನ್ನು ದೆಹಲಿ ಸಿಂಹಾಸನದಲ್ಲಿ ಕುಳ್ಳಿರಿಸಿದರು

- ಆತನು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು
- ಮರಾಠರು ಮತ್ತು ಬ್ರಿಟಿಷರ ಮಧ್ಯೆ ವೈರತ್ವ ಉಂಟಾಯಿತು
- ಪೇಶ್ವೆ ಮಾಧವರಾವ್‌ನ ನಿಧನ
- ನಾರಾಯಣ ರಾವ್ ಪೇಶ್ವೆ ಆದನು ಆದರೆ ರಘೋಬನಿಂದ ಕೊಲೆಗೀಡಾದನು
- ಪೇಶ್ವೆಯ ಸ್ಥಾನಕ್ಕೆ ಏರ್ಪಟ್ಟ ಕಲಹ
- ರಘೋಬನು ಬ್ರಿಟಿಷರನ್ನು ಸಂಪರ್ಕಿಸಿದನು $4X\frac{1}{2}=2$

20. ಪಾಂಡಿಚೇರಿ ವಿಮೋಚನಾ ಚಳವಳಿಯ ಕುರಿತು ಬರೆಯಿರಿ.

ಉತ್ತರ: ಸ್ವಾತಂತ್ರ್ಯ ನಂತರವೂ ಪಾಂಡಿಚೇರಿ, ಕಾರೈಕಲ್, ಮಾಹೆ, ಚಂದ್ರನಗರಗಳು ಫ್ರೆಂಚರ ವಸಾಹತುಗಳಾಗಿದ್ದವು

- ಫ್ರೆಂಚರು ಇವುಗಳ ಮೇಲಿನ ಹಿಡಿತವನ್ನು ಮತ್ತಷ್ಟು ಹೆಚ್ಚಿಸಿದರು
- ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಇತರ ಸಂಘಟನೆಗಳಿಂದ ಹೋರಾಟ
- 1954ರಲ್ಲಿ ಭಾರತಕ್ಕೆ ಸೇರ್ಪಡೆ
- 1962ರಲ್ಲಿ ಪಾಂಡಿಚೇರಿ ಕೇಂದ್ರಾಡಳಿತ ಪ್ರದೇಶವಾಯಿತು

21. ಬಾವಿ ನೀರಾವರಿಯು ಅತ್ಯಂತ ಪ್ರಮುಖವಾದ ನೀರಾವರಿ ಪದ್ಧತಿಯಾಗಿದೆ, ಸ್ಪಷ್ಟೀಕರಿಸಿ.

ಉತ್ತರ: ದೇಶದಲ್ಲಿ ಅತಿ ಹೆಚ್ಚು ಕೃಷಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ

- ಕಡಿಮೆ ಮಳೆ ಬೀಳುವ ಭಾಗಗಳಲ್ಲಿ ಹೆಚ್ಚು ಉಪಯುಕ್ತವಾಗಿದೆ
- ಬಾವಿಗಳ ನಿರ್ಮಾಣ ಮತ್ತು ನಿರ್ವಹಣೆ ಸುಲಭ
- ಕೆರೆ ಮತ್ತು ಕಾಲುವೆ ನೀರಾವರಿ ಸೌಲಭ್ಯವಿಲ್ಲದ ಭಾಗಗಳಲ್ಲಿ ಅವಶ್ಯಕ $4X\frac{1}{2}=2$

22. ವ್ಯವಸಾಯದ ಪ್ರಾಮುಖ್ಯತೆಯನ್ನು ತಿಳಿಸಿ.

ಉತ್ತರ: ಭಾರತೀಯರ ಮುಖ್ಯ ಉದ್ಯೋಗವಾಗಿದೆ

- ಆಹಾರ ಧಾನ್ಯಗಳನ್ನು ಪೂರೈಸುತ್ತದೆ
- ದನಗಳಿಗೆ ಮೇವನ್ನು ಒದಗಿಸುತ್ತದೆ
- ರಾಷ್ಟ್ರೀಯ ಆದಾಯಕ್ಕೆ ಕೊಡುಗೆ
- ಜೀವನಾಧಾರ ಉದ್ಯೋಗವಾಗಿದೆ
- ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ
- ಹಲವಾರು ಕೈಗಾರಿಕೆಗಳನ್ನು ಪೋಷಿಸುತ್ತದೆ
- ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ
- ವಿದೇಶಿ ವಿನಿಮಯಕ್ಕೆ ಸಹಾಯಕ
- ತಲಾ ಆದಾಯದ ಹೆಚ್ಚಳ $4X\frac{1}{2}=2$

23. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ವಿವರಿಸಿ.

ಉತ್ತರ: ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು

- ಉದ್ಯೋಗವಕಾಶಗಳನ್ನು ಹೆಚ್ಚಿಸುವುದು
- ಆರ್ಥಿಕ ಅಸಮಾನತೆಯನ್ನು ಕಡಿಮೆಮಾಡುವುದು
- ಆರ್ಥಿಕಸ್ಥಿರತೆಯನ್ನು ಕಾಯ್ದುಕೊಳ್ಳುವುದು
- ಬಡತನ ನಿವಾರಣೆ
- ಜೀವನಮಟ್ಟ ಸುಧಾರಣೆ
- ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು ಇತ್ಯಾದಿ. $4X\frac{1}{2}=2$

24. ಗ್ರಾಹಕರನ್ನು ಹೇಗೆ ಶೋಷಿಸಲಾಗುತ್ತಿದೆ?

ಉತ್ತರ: ಕಲಬೆರಕೆ

- ಬೆಲೆಯಲ್ಲಿ ಮೋಸ
- ತೂಕ, ಅಳತೆಯಲ್ಲಿ ಮೋಸ
- ವಸ್ತುಗಳ ಗುಣಮಟ್ಟದಲ್ಲಿ ಮೋಸ
- ಅಕ್ರಮ ದಾಸ್ತಾನು
- ಕೃತಕ ಅಭಾವ ಸೃಷ್ಟಿ
- ಮಧ್ಯವರ್ತಿಗಳ ಹಾವಳಿ $4X\frac{1}{2}=2$

IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಆರು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: **9x3=27**

25. ಪ್ಲಾಸಿ ಕದನದ ಪರಿಣಾಮಗಳಾವುವು?

ಉತ್ತರ: ಸಿಜ್ ಉದ್ದೌಲನು ಸೋತನು

- ಆತನು ಸೆರೆಸಿಕ್ಕು ಕೊಲ್ಲಲ್ಪಟ್ಟನು
- ಮೀರ್ ಜಾಫರ್ ಬಂಗಾಳದ ನವಾಬನಾದನು
- ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು
- ಮೀರ್ ಜಾಫರ್ ಕಂಪನಿಗೆ 17 ಕೋಟಿ 70 ಲಕ್ಷ ರೂ. ನೀಡಿದನು
- ಭಾರತೀಯರಲ್ಲಿದ್ದ ಅನೈಕ್ಯತೆಯ ಪ್ರದರ್ಶನ
- ಭಾರತೀಯರಲ್ಲಿದ್ದ ಅಸಂಘಟನೆಯ ಪ್ರದರ್ಶನ
- ಭಾರತೀಯ ವ್ಯಾಪಾರಿ ವರ್ಗದ ಲೋಭಿತನದ ಪ್ರದರ್ಶನ $6X\frac{1}{2}=3$

ಅಥವಾ

ಭಾರತದಲ್ಲಿ ಬ್ರಿಟಿಷ್ ಭೂಕಂದಾಯ ವ್ಯವಸ್ಥೆಯು ಬೀರಿದ ಪರಿಣಾಮಗಳಾವುವು?

ಉತ್ತರ: ರೈತರನ್ನು ಶೋಷಿಸುವ ಹೊಸ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು

- ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು

- ರೈತರು ಭೂಹೀನರಾದರು
- ಭೂಮಿ ಮಾರಾಟದ ವಸ್ತುವಾಯಿತು
- ಅನೇಕ ಜಮೀನ್ದಾರರು ಕೂಡ ಕಂದಾಯವನ್ನು ಸಲ್ಲಿಸಲು ಭೂಮಿಯನ್ನು ಪರಭಾರೆ ಮಾಡಿದರು
- ಕೃಷಿ ಕ್ಷೇತ್ರ ವಾಣಿಜ್ಯೀಕರಣಗೊಂಡಿತು
- ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು
- ಭಾರತೀಯ ರೈತರು ಇಂಗ್ಲೆಂಡಿನ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಬೆಳೆಯಬೇಕಾಯಿತು $6X\frac{1}{2}=3$

26. ನಿತ್ಯಹರಿದ್ವರ್ಣ ಅರಣ್ಯಗಳು, ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳಿಗಿಂತ ಹೇಗೆ ಭಿನ್ನವಾಗಿವೆ?

ಉತ್ತರ:

ನಿತ್ಯಹರಿದ್ವರ್ಣ ಅರಣ್ಯಗಳು	ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು
• 250 ಸೆಂ.ಮೀಗಿಂತ ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿವೆ • ಸದಾ ಹಸಿರಾಗಿರುತ್ತವೆ • 2.6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹರಡಿವೆ • ಪಶ್ಚಿಮಘಟ್ಟಗಳು, ಅಸ್ಸಾಂ, ಮೇಘಾಲಯ, ತ್ರಿಪುರ, ಮಣಿಪುರ, ಅಂಡಮಾನ್–ನಿಕೋಬಾರ್ ಮತ್ತು ಲಕ್ಷದ್ವೀಪಗಳಲ್ಲಿ ಕಂಡುಬರುತ್ತವೆ	• 75–250 ಸೆಂ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಹರಡಿವೆ • ನಿರ್ದಿಷ್ಟ ಒಣಹವೆಯ ಋತುವಿನಲ್ಲಿ ಎಲೆ ಉದುರಿಸುತ್ತವೆ • ಭಾರತದ ಒಟ್ಟು ಅರಣ್ಯ ಪ್ರದೇಶದ ಶೇ.65.50 ಭಾಗದಲ್ಲಿ ಹರಡಿವೆ • ಭಾರತದಲ್ಲಿ ಅತಿ ಹೆಚ್ಚು ವಿಸ್ತಾರವಾಗಿ ಹರಡಿವೆ.

(ಯಾವುದಾದರೂ 3 ವ್ಯತ್ಯಾಸಗಳು) 3X1=3

ಅಥವಾ

ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ ಹೇಗೆ ಉಪಯೋಗಕಾರಿಯಾಗಿದೆ?

ಉತ್ತರ: ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕೈಗೊಳ್ಳಲು ಉಪಯುಕ್ತ

- ಅರಣ್ಯ ಹಾಗೂ ಪರ್ವತ ಚಾರಣ ಮಾಡುವವರಿಗೆ ಮಾರ್ಗ ತಿಳಿಯಲು ಉಪಯುಕ್ತ
- ಸಾರಿಗೆ ನಿರ್ವಹಣೆಯಲ್ಲಿಯೂ ಇದರ ಬಳಕೆ ಹೆಚ್ಚಾಗಿದೆ
- ಸೈನಿಕರು, ವೈಮಾನಿಕರು, ಮೀನುಗಾರರು ಹಾಗೂ ನಾವಿಕರು ಸರಿಯಾದ ಮಾರ್ಗವನ್ನು ಅನುಸರಿಸಲು ಅಗತ್ಯ ಮಾಹಿತಿ ನೀಡುವುದು
- ನಗರಗಳಲ್ಲಿ ಮನೆಬಾಗಿಲಿಗೆ ಸೇವೆ ಕೊಡುವ ಸಂಸ್ಥೆಗಳಿಗೆ ಜೀವಾಳವಾಗಿದೆ
- ಗೂಗಲ್ ಮ್ಯಾಪ್ ನಂತಹ ವ್ಯವಸ್ಥೆಗಳು ಜಿ.ಪಿ.ಎಸ್ ವ್ಯವಸ್ಥೆಯನ್ನು ಬಳಸಿ ದಾರಿ ತೋರಿಸುತ್ತವೆ $6X\frac{1}{2}=3$

27. ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

ಉತ್ತರ: ಅಭಿವೃದ್ಧಿಯಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆ ಮಾಡುವದು

- ಗ್ರಾಮೀಣ ಮೂಲ ಸೌಕರ್ಯಗಳ ಅಭಿವೃದ್ಧಿ: ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಆಸ್ಪತ್ರೆ, ಕಟ್ಟಡಗಳು, ಮಾರುಕಟ್ಟೆ ಇತ್ಯಾದಿ.

- ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕೆ ಪ್ರೋತ್ಸಾಹ
- ವಯಸ್ಕರ ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ
- ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ
- ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ
- ಕೆರೆ ಕಟ್ಟೆಗಳ ನಿರ್ಮಾಣ, ಹೂಳು ತೆಗೆಯುವುದು, ಕಿರಿ ನೀರಾವರಿ ಯೋಜನೆಗಳು
- ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆ
- ಬಡತನ ಮತ್ತು ನಿರುದ್ಯೋಗ ಹೋಗಲಾಡಿಸುವುದು: ಮಹತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸ್ವರ್ಣ ಜಯಂತಿ ಗ್ರಾಮ ಸ್ವ–ರೋಜಗಾರ್ ಯೋಜನೆ
- ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವುದು: ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ, ಆಶ್ರಯ ಯೋಜನೆ, ಬಸವ ವಸತಿ ಯೋಜನೆ
- ಬಡಜನರಿಗೆ ಆಹಾರ ಧಾನ್ಯ ಒದಗಿಸುವುದು
- ಸುವರ್ಣ ಗ್ರಾಮೋದಯ ಯೋಜನೆ
- ಸಮಾಜ ಕಲ್ಯಾಣ ಸೇವೆಗಳು: ವಯೋವೃದ್ಧರು, ದಿವ್ಯಾಂಗರು, ಮಾನಸಿಕ ಅಸ್ವಸ್ಥರು, ವಿಧವೆಯರಿಗೆ
- ಮಹಿಳಾ ಸ್ವ–ಸಹಾಯ ಸಂಘಗಳಿಗೆ ಪ್ರೋತ್ಸಾಹ
- ಗ್ರಾಮೀಣ ಕಲೆ, ಸಂಸ್ಕೃತಿ ಶ್ರೀಮಂತಗೊಳ್ಳುತ್ತದೆ $6X\frac{1}{2}=3$

ಅಥವಾ

ವೈಯಕ್ತಿಕ ಹಣಕಾಸು ಹಾಗೂ ಸಾರ್ವಜನಿಕ ಹಣಕಾಸುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿ

ಉತ್ತರ:

ವೈಯಕ್ತಿಕ ಹಣಕಾಸು	ಸಾರ್ವಜನಿಕ ಹಣಕಾಸು
• ವ್ಯಕ್ತಿ ಅಥವಾ ಕುಟುಂಬದ ಆದಾಯ ವೆಚ್ಚಗಳಿಗೆ ಸಂಬಂಧಿಸಿದೆ • ಆದಾಯಕ್ಕೆ ತಕ್ಕಂತೆ ವೆಚ್ಚ ಮಾಡಲಾಗುತ್ತದೆ • ಹಣಕಾಸಿನ ವ್ಯವಹಾರಗಳನ್ನು ಗೌಪ್ಯವಾಗಿಡಲಾಗುತ್ತದೆ • ವ್ಯಕ್ತಿ ಅಥವಾ ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿ, ಅಭಿವೃದ್ಧಿಗೆಪೂರಕವಾಗಿರುತ್ತದೆ.	• ಸರ್ಕಾರದ ಆದಾಯ ವೆಚ್ಚಗಳಿಗೆ ಸಂಬಂಧಿಸಿದೆ • ವೆಚ್ಚಗಳಿಗೆ ತಕ್ಕಂತೆ ಆದಾಯವನ್ನು ಹೊಂದಿಸಲಾಗುತ್ತದೆ • ಹಣಕಾಸಿನ ವ್ಯವಹಾರಗಳನ್ನು ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗುತ್ತದೆ. • ಸರ್ಕಾರವು ಉಳಿತಾಯ ಮಾಡಿದರೆ ದೇಶದ ಪ್ರಗತಿಯನ್ನು ಕುಂಠಿತ ಗೊಳಿಸುತ್ತದೆ.

(ಯಾವುದಾದರೂ 3 ವ್ಯತ್ಯಾಸಗಳು) 3X1=3

28. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದಾಗುವ ಅನುಕೂಲಗಳನ್ನು ವಿಶ್ಲೇಷಿಸಿ.

ಉತ್ತರ: ಸಾರ್ವಜನಿಕರಿಂದ ಠೇವಣಿ ಅಂಗೀಕರಿಸುವುದು

- ಸಾಲಗಳನ್ನು ಕೊಡುವುದು
- ಹಣವನ್ನು ವರ್ಗಾಯಿಸುವುದು
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು
- ಖರ್ಚು ಕಾರ್ಡು ಮತ್ತು ಜಮಾ ಕಾರ್ಡು ಕೊಡುವುದು

- ಹಣದ ವಹಿವಾಟನ್ನು ಮಾಡುತ್ತವೆ
- ಹಣದ ಭದ್ರತೆಯನ್ನು ಕಾಪಾಡುತ್ತವೆ
- ಸಹಿಗಳಿಗೆ ಜವಾಬ್ದಾರಿ ಹಾಕುವುದು
- ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರ ಕೊಡುವುದು
- ಸರ್ಕಾರದ ಹಣಕಾಸಿನ ವ್ಯವಹಾರ ನಿರ್ವಹಿಸುವುದು
- ಭರವಸೆ ಸೇವೆಗಳು
- ಹಣದ ಭದ್ರತೆ ಕಾಪಾಡುವುದು
- ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ
- ಹಣ ವಸೂಲು ಮಾಡಲು ಸಹಾಯ ಮಾಡುತ್ತದೆ
- ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ $6X\frac{1}{2}=3$

ಅಥವಾ

ಉದ್ಯಮಿಗಳು ಕೈಗೊಳ್ಳುವ ಕಾರ್ಯಗಳನ್ನು ವಿಶ್ಲೇಷಿಸಿ.

ಉತ್ತರ: ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ

- ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ
- ಉತ್ಪಾದಿಸುವ ವಸ್ತುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ
- ಎಲ್ಲ ಅಂಶಗಳನ್ನು ಸಂಯೋಜಿಸುತ್ತಾನೆ
- ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ
- ತನ್ನ ಉದ್ಯಮದ ಆಯವ್ಯಯವನ್ನು ನಿಭಾಯಿಸುತ್ತಾನೆ
- ಕಷ್ಟ–ನಷ್ಟಗಳು ಮತ್ತು ಅನಿಶ್ಚಿತತೆಗಳನ್ನು ಎದುರಿಸುತ್ತಾನೆ
- ವ್ಯಾಪಾರದ ಮಾರ್ಗಗಳನ್ನು ತಿಳಿಸಿ, ಅದು ಕಾರ್ಯಗತಗೊಳ್ಳಲು ಮಾರ್ಗದರ್ಶನ ನೀಡುತ್ತಾನೆ $6X\frac{1}{2}=3$

29. ಭಾರತೀಯ ಸಮಾಜವನ್ನು ಸುಧಾರಿಸುವಲ್ಲಿ ದಯಾನಂದ ಸರಸ್ವತಿಯವರ ಪಾತ್ರವು ಸದಾ ಸ್ಮರಣೀಯವಾದುದು, ಸಮರ್ಥಿಸಿ.

ಉತ್ತರ: ಆರ್ಯ ಸಮಾಜವನ್ನು ಸ್ಥಾಪಿಸಿದರು

- ವೇದಗಳು ಸತ್ಯ ಮತ್ತು ಜ್ಞಾನದ ಮೂಲವೆಂದರು
- 'ವೇದಗಳಿಗೆ ಹಿಂದಿರುಗಿ' ಎಂದು ಘೋಷಿಸಿದರು
- ವಿಗ್ರಹಾರಾಧನೆ, ಜಾತಿಪದ್ಧತಿಯನ್ನು ಖಂಡಿಸಿದರು
- ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು
- ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು
- 'ಸತ್ಯಾರ್ಥ ಪ್ರಕಾಶ' ಕೃತಿಯನ್ನು ರಚಿಸಿದರು
- 'ಶುದ್ಧಿ ಚಳುವಳಿ'ಯನ್ನು ಆರಂಭಿಸಿದರು.
- "ಭಾರತೀಯರಿಗೇ ಭಾರತ" ಎಂದು ಘೋಷಿಸಿದರು $6X\frac{1}{2}=3$

30. 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವಾರು ಕಾರಣಗಳಿಂದ ವಿಫಲವಾಯಿತು. ಸ್ಪಷ್ಟೀಕರಿಸಿ.

ಉತ್ತರ: ಇಡೀ ಭಾರತವನ್ನು ವ್ಯಾಪಿಸಿದ ಹೋರಾಟವಾಗಿರಲಿಲ್ಲ

- ರಾಜರ ಮತ್ತು ಜಮೀನ್ದಾರರ ಸ್ವಹಿತಾಸಕ್ತಿಗಾಗಿ ನಡೆದಿತ್ತು
- ಯೋಜಿತ ಹೋರಾಟವಾಗಿರಲಿಲ್ಲ
- ಭಾರತೀಯ ಸೈನಿಕರಲ್ಲಿದ್ದ ಭಿನ್ನತೆ
- ಸೂಕ್ತ ಮಾರ್ಗದರ್ಶನವಿರಲಿಲ್ಲ
- ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು
- ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ ಇತ್ತು
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ
- ಹಲವು ದೇಶೀಯ ರಾಜರು ಬ್ರಿಟಿಷರಿಗೆ ನಿಷ್ಠೆ ತೋರಿದರು
- ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡರು $6X\frac{1}{2}=3$

31, ಶಸ್ತ್ರಾಸ್ತ್ರ ಪೈಪೋಟಿಯ ಪರಿಣಾಮಗಳನ್ನು ವಿವರಿಸಿ.

ಉತ್ತರ: ವಿಶ್ವದಾದ್ಯಂತ ಭಯ, ಅಸ್ಥಿರತೆಯ ಸೃಷ್ಟಿ

- ಯುದ್ಧದ ಸಂಭವನೀಯತೆ ಹೆಚ್ಚಾಗುತ್ತದೆ
- ವಿಶ್ವಶಾಂತಿ ಸ್ಥಾಪನೆಗೆ ಅಡ್ಡಿಯಾಗುತ್ತದೆ
- ಆರ್ಥಿಕವಾಗಿ ನಷ್ಟ
- ಆರ್ಥಿಕ ಅಸ್ಥಿರತೆಗೆ ದಾರಿ
- ಸಮಯ ಮತ್ತು ಹಣದ ಪೋಲು
- ಕಾರ್ಮಿಕರ ಬೆವರು ವ್ಯರ್ಥ
- ವಿಜ್ಞಾನಿಗಳ ಬೌದ್ಧಿಕತೆ ವ್ಯರ್ಥ
- ಮಕ್ಕಳ ಅಕಾಂಕ್ಷೆಗೆ ಕೊಳ್ಳಿ $6X\frac{1}{2}=3$

32. ಸಂಘಟಿತ ಹಾಗೂ ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

ಉತ್ತರ:

ಸಂಘಟಿತ ಕೆಲಸಗಾರರು	ಅಸಂಘಟಿತ ಕೆಲಸಗಾರರು
• ಕಾನೂನು ಕಾಯ್ದೆಗಳಿಗೆ ಬದ್ಧತೆ • ನಿಗದಿತ ವೇತನ ಮತ್ತು ಭತ್ಯೆ • ವಿರಾಮ ಮತ್ತು ನಿವೃತ್ತಿ ವೇತನ ಸೌಲಭ್ಯ • ಅಧಿಕಾರದ ಏಣಿ ಶ್ರೇಣಿ ಇರುತ್ತದೆ • ವೈದ್ಯಕೀಯ ಸೌಲಭ್ಯಗಳಿವೆ • ಕೆಲಸದ ಭದ್ರತೆ ಇರುತ್ತದೆ • ವೇತನಸಹಿತ ರಜೆ ಸೌಲಭ್ಯವಿರುತ್ತದೆ • ಶಿಕ್ಷಕರು, ಸೈನಿಕರು, ಬ್ಯಾಂಕ್, ವಿಮಾ ನೌಕರರು	• ಕಾಯ್ದೆ ಕಾನೂನುಗಳಿರುವುದಿಲ್ಲ • ನಿಗದಿತ ವೇತನ ಮತ್ತು ಭತ್ಯೆ ಸೌಲಭ್ಯಗಳಿರುವುದಿಲ್ಲ • ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯಗಳಿರುವುದಿಲ್ಲ • ಅಧಿಕಾರದ ಏಣಿ ಶ್ರೇಣಿ ಇರುವುದಿಲ್ಲ • ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ • ಕೆಲಸದ ಭದ್ರತೆ ಇರುವುದಿಲ್ಲ • ವೇತನಸಹಿತ ರಜೆ ಸೌಲಭ್ಯ ಇರುವುದಿಲ್ಲ. • ಮನೆಕೆಲಸಗಾರರು, ಕೃಷಿ ಕಾರ್ಮಿಕರು, ವಾಹನ ರಿಪೇರಿ ಮಾಡುವವರು ಇತ್ಯಾದಿ

(ಯಾವುದಾದರೂ 3 ವ್ಯತ್ಯಾಸಗಳು) 3X1=3

33. ಭೂಕಂಪದಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ.

ಉತ್ತರ: ಜನರ ಸಾವು ನೋವು

- ಆಸ್ತಿ ಪಾಸ್ತಿಗಳಿಗೆ ಹಾನಿ
- ಸಾರಿಗೆ ಸಂಪರ್ಕ ಕಡಿತ
- ರೋಗಗಳ ಹರಡುವಿಕೆ
- ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುವಿಕೆ
- ಸುನಾಮಿ
- ನದಿಯ ದಿಕ್ಕು ಬದಲಾಗುವಿಕೆ $6X\frac{1}{2}=3$

V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: **4x4=16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳು ಅನುಸರಿಸಿದ ವಿಧಾನಗಳನ್ನು ವಿವರಿಸಿ.

ಉತ್ತರ: ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು

- ಹಿಂಸಾತ್ಮಕ ಮಾರ್ಗದಿಂದ ಮಾತ್ರ ಬ್ರಿಟಿಷರನ್ನು ಓಡಿಸಬಹುದೆಂದು ನಂಬಿದ್ದರು
- ವಿ. ಡಿ. ಸಾವರ್ಕರ್, ಅರಬಿಂದೋ ಘೋಷ್, ಶ್ಯಾಮ್ ಜಿ ಕೃಷ್ಣವರ್ಮ, ಖುದಿರಾಮ್ ಬೋಸ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್
- ರಹಸ್ಯ ಸಂಘಗಳ ಸ್ಥಾಪನೆ
- ಅನುಶೀಲನ ಸಮಿತಿ, ಅಭಿನವ ಭಾರತ ಮುಖ್ಯವಾದವು
- ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ

- ಹಣಕಾಸು ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹಣೆ
- ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು
- ಕೊಲೆ ಸಂಚಿನ ಆರೋಪದ ಮೇಲೆ ಕ್ರಾಂತಿಕಾರಿಗಳ ಬಂಧನ
- ಕ್ರಾಂತಿಕಾರಿಗಳನ್ನು ಗಲ್ಲಿಗೇರಿಸಲಾಯಿತು $8X\frac{1}{2}=4$

ಅಥವಾ

ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ರಾಜಾ ರಾಮ್‌ಮೋಹನ್ ರಾಯರ ಪಾತ್ರವನ್ನು ವಿವರಿಸಿ.

ಉತ್ತರ: ಬ್ರಹ್ಮ ಸಮಾಜದ ಸಂಸ್ಥಾಪಕರಲ್ಲಿ ಪ್ರಮುಖರು

- ಭಾರತೀಯ ನವೋದಯದ ಜನಕ
- ಸಂಸ್ಕೃತ, ಅರೇಬಿಕ್, ಇಂಗ್ಲಿಷ್, ಫ್ರೆಂಚ್, ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಪಾಂಡಿತ್ಯ
- ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧಧರ್ಮಗಳ ಅಧ್ಯಯನ
- ಬಹುದೇವತಾರಾಧನೆ/ಮೂರ್ತಿ ಪೂಜೆಯನ್ನು ಪ್ರಶ್ನಿಸಿದರು
- ಆಧುನಿಕ ವಿಜ್ಞಾನ ಮತ್ತು ಇಂಗ್ಲಿಷ್ ಶಿಕ್ಷಣ ಅವಶ್ಯಕವೆಂದರು
- ಸ್ತ್ರೀಶೋಷಣೆಯನ್ನು ವಿರೋಧಿಸಿದರು
- ಸತಿಪದ್ಧತಿ, ಬಾಲ್ಯವಿವಾಹಗಳ ವಿರುದ್ಧ ಹೋರಾಟ
- ಸತಿಸಹಗಮನ ಪದ್ಧತಿ ವಿರುದ್ಧದ ಕಾಯ್ದೆಯನ್ನು ಬೆಂಬಲಿಸಿದರು
- 'ಸಂವಾದ ಕೌಮುದಿ' ಪತ್ರಿಕೆ ಆರಂಭಿಸಿದರು
- ಜನರಲ್ಲಿ ವೈಚಾರಿಕತೆ ಬೆಳೆಸಲು ಪ್ರಯತ್ನ
- ವಿಗ್ರಹಾರಾಧನೆ, ಬಹುದೇವತಾರಾಧನೆಗೆ ವಿರೋಧ
- ಯಜ್ಞಯಾಗಾದಿಗಳ ಖಂಡನೆ
- ರಾಷ್ಟ್ರಪ್ರಜ್ಞೆ ಜಾಗೃತಿಗೆ ಪ್ರಯತ್ನ $8X\frac{1}{2}=4$

35. ಕಪ್ಪು ಮಣ್ಣಿನ ಗುಣ–ಲಕ್ಷಣಗಳನ್ನು ಪಟ್ಟಿಮಾಡಿ.

ಉತ್ತರ: ಅಗ್ನಿಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ

- ಕಪ್ಪು ಬಣ್ಣವನ್ನು ಹೊಂದಿದೆ
- ರೆಗೂರ್ ಮಣ್ಣು ಎಂದೂ ಕರೆಯಲ್ಪಡುತ್ತದೆ
- ಕಪ್ಪು ಹತ್ತಿ ಮಣ್ಣು ಎಂದೂ ಕರೆಯಲ್ಪಡುತ್ತದೆ
- ಅಗ್ನಿಶಿಲೆಗಳ ಸವೆತದಿಂದಾಗಿದೆ
- ಫಲವತ್ತಾದುದು
- ಹೆಚ್ಚು ಜೇಡಿ ಮಣ್ಣಿನ ಕಣಗಳಿಂದ ಕೂಡಿದೆ
- ತೇವಾಂಶವನ್ನು ಹಿಡಿದಿಟ್ಟುಕೊಳ್ಳುತ್ತದೆ
- ಡೆಕ್ಕನ್ ಟ್ರಾಪ್ ಪ್ರದೇಶದಲ್ಲಿ ಹರಡಿದೆ
- ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ
- ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ ಹೊಗೆಸೊಪ್ಪು ಇತ್ಯಾದಿ ಬೆಳೆ ಬೆಳೆಯಬಹುದು $8X\frac{1}{2}=4$

ಅಥವಾ

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳ ಸ್ಥಾನೀಕರಣವನ್ನು ಪ್ರಭಾವಿಸುವ ಅಂಶಗಳನ್ನು ಪಟ್ಟಿಮಾಡಿ.

ಉತ್ತರ: ಕಚ್ಚಾವಸ್ತುಗಳು (ಕಬ್ಬಿಣದ ಅದಿರು)

- ಶಕ್ತಿ ಸಂಪನ್ಮೂಲಗಳು
- ಮಾರುಕಟ್ಟೆ
- ಸಂಚಾರ ಸೌಲಭ್ಯ
- ಕಾರ್ಮಿಕರ ಪೂರೈಕೆ
- ಬಂದರುಗಳ ಸೌಲಭ್ಯ
- ಕಡಿಮೆ ದರದ ಭೂಮಿ ದೊರೆಯುವಿಕೆ
- ತಾಂತ್ರಿಕತೆ
- ಸರ್ಕಾರದ ನೀತಿ ನಿಯಮಗಳು $8X\frac{1}{2}=4$

36. ಮೂರನೇ ಆಂಗ್ಲೋ ಮೈಸೂರು ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

ಉತ್ತರ: **ಕಾರಣಗಳು**

- ತಿರುವಾಂಕೂರಿನ ರಾಜಕಾರಣ
- ತಿರುವಾಂಕೂರಿನ ರಾಜನಿಂದ ಕೊಚ್ಚಿಯಲ್ಲಿ ಕೋಟೆಯ ನಿರ್ಮಾಣ
- ಆತನಿಂದ ಡಚ್ಚರಿಂದ ಆಯಕೋಟಾ ಮತ್ತು ಕಾಂಗನೂರು ಪಡೆದುಕೊಂಡನು (ಎಲ್ಲ ನಾಲ್ಕೂ ಅಂಶಗಳು)
- ಇದು ಒಪ್ಪಂದದ ಉಲ್ಲಂಘನೆ

ಪರಿಣಾಮಗಳು

- ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ
- ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬ್ರಿಟಿಷರಿಗೆ ಬಿಟ್ಟು ಕೊಡುವುದು
- ಮೂರು ಕೋಟಿ ರೂಪಾಯಿಗಳನ್ನು ಯುದ್ಧ ನಷ್ಟ ಭರ್ತಿಯಾಗಿ ಕೊಡುವುದು
- ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ನೀಡುವುದು
- ಸೆರೆಯಲಿದ್ದ ಸೈನಿಕರ ಬಿಡುಗಡೆ
- ಶ್ರೀರಂಗಪಟ್ಟಣದಿಂದ ಬ್ರಿಟಿಷ್ ಸೇನೆಯ ಹಿಂತೆಗೆತ (ಯಾವುದಾದರೂ ನಾಲ್ಕು ಅಂಶಗಳು) $8X\frac{1}{2}=4$

37. ಭ್ರಷ್ಟಾಚಾರವು ಹಲವಾರು ಋಣಾತ್ಮಕ ಪರಿಣಾಮಗಳಿಗೆ ಕಾರಣವಾಗುತ್ತದೆ. ಹೇಗೆ?

ಉತ್ತರ: ಇದು ಸಮಾಜ ವಿರೋಧಿ ಕೃತ್ಯ

- ಅನೈತಿಕವಾದುದು
- ಕಾನೂನು ಬಾಹಿರವಾದುದು
- ಉತ್ತಮ ಆಡಳಿತದ ಪರಮ ಶತ್ರು
- ಪಾರದರ್ಶಕತೆ ಹಾಗೂ ಉತ್ತರದಾಯಿತ್ವಕ್ಕೆ ಭಂಗ
- ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೆ ದಾರಿ

- ಅಧಿಕಾರಿಶಾಹಿಯಲ್ಲಿ ಲೋಪದೋಷಗಳಿಗೆ ಕಾರಣವಾಗುತ್ತದೆ
- ಸಾರ್ವಜನಿಕ ವಲಯದಲ್ಲಿ ವಂಚನೆಗೆ ಅನುವು ಮಾಡಿಕೊಡುತ್ತದೆ.
- ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ. $8X\frac{1}{2}=4$

VI. 38. **ನಿಮಗೆ ಒದಗಿಸಿರುವ ಭಾರತದ ನಕ್ಷೆಯಲ್ಲಿ ಇವುಗಳಲ್ಲಿ ಯಾವುದಾದರೂ ಐದನ್ನು ಗುರುತಿಸಿ.** **5x1=5**

A. ಮಲಬಾರ್ ತೀರ

B. 23^0 30^1 ಉತ್ತರ ಅಕ್ಷಾಂಶ

C. ಸೂರತ್

D. ದಾಮೋದರ್ ಯೋಜನೆ

E. ನರೋರ


F. ಕಾಂಡ್ಲ

G. ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

H. ರೂಯ್ಲಿ

I. ಸೇಲಂ

J. ಕೊಯ್ನ



ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ.

(ಪ್ರಶ್ನೆ ಸಂಖ್ಯೆ 38ರ ಬದಲಿಗೆ)

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಪ್ರಮುಖ ಉದ್ದೇಶಗಳಾವುವು?

ಉತ್ತರ: ನೀರಾವರಿ ಸೌಲಭ್ಯವನ್ನು ಒದಗಿಸುವುದು

- ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು
- ನದಿಗಳ ಪ್ರವಾಹವನ್ನು ನಿಯಂತ್ರಿಸುವುದು
- ನೌಕಾಯಾನದ ಸೌಲಭ್ಯವನ್ನು ಒದಗಿಸುವುದು
- ಗೃಹಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು
- ಮಣ್ಣಿನ ಸವಕಳಿಯ ನಿಯಂತ್ರಣ
- ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು
- ಅರಣ್ಯ ಸಂಪತ್ತನ್ನು ವೃದ್ಧಿಸುವುದು

ಅಥವಾ

ಹಿಮಾಲಯ ಪರ್ವತಗಳಿಂದಾಗುವ ಅನುಕೂಲಗಳಾವುವು?

ಉತ್ತರ: ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ

- ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಯುತ್ತವೆ
- ನದಿಗಳ ಉಗಮ ಪ್ರದೇಶವಾಗಿವೆ
- ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ
- ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ
- ಖನಿಜ ಸಂಪನ್ಮೂಲಗಳನ್ನು ಹೊಂದಿವೆ
- ಪ್ರವಾಸೋದ್ಯಮ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಸಿದ್ಧಿಯಾಗಿವೆ
- ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯತಾಣವಾಗಿವೆ 5x1=5